ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 280
ಸದಸ್ಯರ ಹೆಸರು	: ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	: 04-03-2020
ಉತ್ತರಿಸುವ ಸಚಿವರು	: ಕಂದಾಯ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕೃಷಿ ಜಮೀನುಗಳಲ್ಲಿ ಅನಧಿಕೃತವಾಗಿ ಯಾವುದೇ ಭೂಪರಿವರ್ತನೆಯಾಗದೆ ಎಷ್ಟು ಬಡಾವಣೆಗಳು/ನಿವೇಶನಗಳನ್ನು ರಚಿಸಲಾಗಿದೆ; ರಚಿಸಿದ್ದಲ್ಲಿ, ತಾಲ್ಲೂಕುವಾರು, ಹೋಬಳಿವಾರು, ಗ್ರಾಮವಾರು ಮಾಹಿತಿ ನೀಡುವುದು;</td><td>ಬೆಂಗಳೂರು ನಗರ ಜಿಲ್ಲೆಯ 5 ತಾಲ್ಲೂಕುಗಳ ವ್ಯಾಪ್ತಿಯಲ್ಲಿ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಅಂದರೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 95 ರನ್ವಯ ಭೂಪರಿವರ್ತನೆ ಆದೇಶ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ಬಡಾವಣೆಗಳ ಒಟ್ಟು ವಿವರ ಈ ಕೆಳಕಂಡಂತಿದೆ :
<table>
<tr><th colspan="4">ಘೋಷ್ವಾರೆ</th></tr>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಸಂಖ್ಯೆ</th><th>ವಿಸ್ತೀರ್ಣ</th></tr>
<tr><td>1</td><td>ಬೆಂಗಳೂರು ಉತ್ತರ ತಾಲ್ಲೂಕು</td><td>960</td><td>1760–07</td></tr>
<tr><td>2</td><td>ಬೆಂಗಳೂರು ದಕ್ಷಿಣ ತಾಲ್ಲೂಕು</td><td>588</td><td>1267–39</td></tr>
<tr><td>3</td><td>ಬೆಂಗಳೂರು ಪೂರ್ವ ತಾಲ್ಲೂಕು</td><td>233</td><td>354–00</td></tr>
<tr><td>4</td><td>ಯಲಹಂಕ ತಾಲ್ಲೂಕು</td><td>432</td><td>1004–17</td></tr>
<tr><td>5</td><td>ಆನೇಕಲ್ ತಾಲ್ಲೂಕು</td><td>302</td><td>411–18</td></tr>
<tr><td colspan="2">ಒಟ್ಟು</td><td>2515</td><td>4798–01</td></tr>
</table>
(ವಿವರಗಳನ್ನು ಸಿ.ಡಿ. ಯಲ್ಲಿ ಸಲ್ಲಿಸಿದೆ)</td></tr>
<tr><td>ಆ)</td><td>ಅನಧಿಕೃತ ಬಡಾವಣೆಗಳ ಮೇಲೆ ಭೂಪರಿವರ್ತನೆ ಇಲ್ಲದೆ ಇರತಕ್ಕಂತ ಕೃಷಿ ಜಮೀನುಗಳ ಮೇಲೆ ನಿರ್ಮಾಣವಾಗಿರುವ ಹಳೆಯ ಮತ್ತು ಹೊಸ ಬಡಾವಣೆಗಳ ಮೇಲೆ ಕಾನೂನಿನಡಿಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ: ನಅಇ/248/ಬೆಂಅದೇ/2016; ದಿನಾಂಕ: 13.07.2016 ರನ್ವಯ ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತ ನಿರ್ಮಾಣ ಆಗುತ್ತಿರುವ ಅನಧಿಕೃತ ಬಡಾವಣೆಗಳನ್ನು ತಡೆಯುವ ಸಲುವಾಗಿ ಮಾರ್ಗಸೂಚಿಗಳನ್ನು ರೂಪಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ 15 ಸದಸ್ಯರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲಾಗಿರುತ್ತದೆ.
ಮುಂದುವರೆದು, ಅನಧಿಕೃತ ಬಡಾವಣೆ ನಿರ್ಮಾಣ ಮಾಡಿರುವವರ ವಿರುದ್ಧ ಕರ್ನಾಟಕ ಕಂದಾಯ ಕಾಯ್ದೆ 1964 ರ ಕಲಂ 96 (2) ರಡಿ ಕ್ರಮ ಜರುಗಿಸಲಾಗುತ್ತಿದೆ.</td></tr>
</table>

ಸಂಖ್ಯೆ: ಆರ್‌ಡಿ 07 ಎಲ್‌ಜಿಕ್ಯೂ 2020

(ಆರ್. ಅಶೋಕ)
ಕಂದಾಯ ಸಚಿವರು.